ಸಂಪುಟ : 40 ಸಂಚಿಕೆ 129 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 05 ಜೂನ್ 2017 ಸೋಮವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ಇಂದು ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ವಿಶ್ವಪರಿಸರ ದಿನಾಚರಣೆ



ಭಾರತದ ಸಾಯಿ ಪ್ರಣೀತ್ ಮುಡಿಗೆ ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಪ್ರಶಸ್ತಿ

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಸಂಜೆ 6ಕ್ಕೆ ಆಸ್ಟ್ರೇಲಿಯಾ ಮತ್ತು ಬಾಂಗ್ಲಾದೇಶ ನಡುವೆ ಪಂದ್ಯ



₹55 Discount Per Gram
Gold 916 ₹ 2748/-
Silver ₹ 41400/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

## ಮೌಢ್ಯ ನಿಷೇಧ:ಜಾರಿಗೆ ಮುನ್ನ ಚಿಂತನೆ ಅಗತ್ಯ

### ಶ್ರೀ ರೇಣುಕಾಚಾರ್ಯ ಜಯಂತಿ ಯುಗ ಮಹೋತ್ಸವದಲ್ಲಿ ರಂಭಾಪುರಿ ಶ್ರೀಗಳ ಸಲಹೆ

**ಕೊರಟಗೆರೆ**

ರಾಜ್ಯ ಸರ್ಕಾರ ಮೌಢ್ಯ ನಿಷೇಧ ಮಸೂದೆ ಕಾನೂನು ಜಾರಿಗೊಳಿಸುವ ವಿಚಾರದಲ್ಲಿ ಯಾವುದೇ ಮಠಾಧೀಶರಲ್ಲೂ ವಿರೋಧವಿರುವುದಿಲ್ಲ, ಆದರೆ ಸಮಾಜಕ್ಕೆ ಕಂಟಕ ಪ್ರಾಯವಾಗುವಂತಹ ಮೌಢ್ಯಗಳು ನಿಲ್ಲಬೇಕು ಎಂಬುವ ವಿಚಾರದಲ್ಲಿ ಮೌಲ್ಯ ಉಳ್ಳದ್ದು ಯಾವುದು, ಮೌಢ್ಯ ಉಳ್ಳದ್ದು ಯಾವುದು ಎಂಬುದನ್ನು ವರ್ಗೀಕರಣ ಮಾಡದೆ ಕಾನೂನು ಜಾರಿಗೊಳಿಸುವುದು ಸಹಜವಾಗಿ ಒಂದು ವರ್ಗದ ಜನರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಎಂದು ಶ್ರೀ ಮದ್ ರಂಭಾಪುರಿ ವೀರ ಸಿಂಹಾಸನಾದೀಶ್ವರ 1008 ಜಗದ್ಗುರು ಪ್ರಸನ್ನ ರೇಣುಕಾ ವೀರಸೋಮೇಶ್ವರ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದರು ಪರೋಕ್ಷವಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

> ಎತ್ತಿನಹೊಳೆ ಜಾರಿಗೊಳಿಸಬೇಕೆಂಬುದು ರಾಜ್ಯ ಸರ್ಕಾರದ ಕನಸಾಗಿದ್ದು, ಕಾಮಗಾರಿ ನಿಧಾನ ಗತಿಯಲ್ಲಿ ನಡೆಯುತ್ತಿರುವುದು ಈ ಸರ್ಕಾರದ ಅವಧಿಯಲ್ಲಿ ನೀರಾವರಿ ಯೋಜನೆ ಪೂರ್ಣಗೊಳ್ಳಲಿದೆ ಎಂಬುದು ಅನುಮಾನಕರವಾಗಿದೆ. ಯಾವುದೇ ಸರ್ಕಾರಗಳು ಬರಲಿ ಆ ಭಾಗದ ನೀರಾವರಿಗೆ ಸರ್ಕಾರ ಹೆಚ್ಚು ಪ್ರಾಮಾಣಿಕವಾಗಿ ನಡೆದುಕೊಂಡಿದ್ದೇ ಆದರೆ ಆ ಭಾಗದ ರೈತರಿಗೆ ಅನುಕೂಲವಾಗುವುದರಲ್ಲಿ ಅನುಮಾನವಿರುವುದಿಲ್ಲ.
> -ರಂಭಾಪುರಿ ಶ್ರೀಗಳು



ಸಿದ್ದರಬೆಟ್ಟದಲ್ಲಿ ನಡೆದ ಜನಜಾಗೃತಿ ಧರ್ಮ ಸಮಾರಂಭದಲ್ಲಿ ರಂಭಾಪುರಿ ಶ್ರೀಗಳೊಂದಿಗೆ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮೀಜಿ, ಶಾಸಕ ಪಿ.ಆರ್.ಸುಧಾಕರಲಾಲ್, ಪ್ರೇಮಾ ಮಹಲಿಂಗಪ್ಪ, ಮುರುಳೀಧರ ಹಾಲಪ್ಪ ಇತರರಿದ್ದರು.

ಅವರು ಭಾನುವಾರ ಸಿದ್ದರಬೆಟ್ಟದ ಬಾಳೆಹೊನ್ನೂರು ಖಾಸಾ ಶಾಖಾಮಠದಲ್ಲಿ 11ನೇ ವಾರ್ಷಿಕೋತ್ಸವ ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗ ಮಹೋತ್ಸವ, ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತ್ಯೋತ್ಸವ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ಹಾಗೂ ಜನಜಾಗೃತಿ ಧರ್ಮ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡುತ್ತಾ ಮೌಢ್ಯ ನಿಷೇಧ ಮಸೂದೆ ಜಾರುಗೊಳಿಸುವ ಮುನ್ನ ಧಾರ್ಮಿಕ ಭಾವನೆಗಳನ್ನ ಕುಲಂಕಷವಾಗಿ ಅವಲೋಕಿಸಿ ಮೌಢ್ಯ ನಿಷೇಧದಿಂದ ಸಮಾಜಕ್ಕೆ ಆಗಬಹುದಾದಂತಹ ಭಾವನಾತ್ಮಕ ಸಂಬಂಧಗಳನ್ನ ಅರಿತು ಜಾರಿಗೊಳಿಸುವುದು ಒಳಿತು ಎಂದರು.

ರಾಜ್ಯ ಸರ್ಕಾರ ಮೌಢ್ಯ ನಿಷೇಧ ಕಾನೂನು ಜಾರಿಗೊಳಿಸುವ ಮನಸ್ಥಿತಿ ಸಂದರ್ಭದಲ್ಲಿ ಕೆಲವು ಮಠಾಧೀಶರು ಮೌಢ್ಯ ನಿಷೇಧ ಕಾನೂನು ಜಾರಿಗೊಳಿಸುವಂತೆ ಒತ್ತಾಯಿಸಿದರು, ಅದಕ್ಕೆ ಸರ್ಕಾರ ಪರೋಕ್ಷವಾಗಿ ಬೆಂಬಲ » 6ನೇ ಪುಟಕ್ಕೆ

## ಇಂದಿನಿಂದ ಮುಂದುವರೆಯುವ ಬಜೆಟ್ ಅಧಿವೇಶನ

**ಬೆಂಗಳೂರು**

ಇಂದಿನಿಂದ ಹತ್ತು ದಿನಗಳ ಕಾಲ ಮುಂದುವರೆಯುವ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಇದು ರಾಜ್ಯ ಸರ್ಕಾರಕ್ಕೆ ಅಗ್ನಿ ಪರೀಕ್ಷೆಯಾಗಿದೆ.

ಹತ್ತು ದಿನಗಳ ಈ ಅಧಿವೇಶನದಲ್ಲಿ 2017- 18ನೇ ಸಾಲಿನ ಮುಂಗಡಪತ್ರಕ್ಕೆ ಸದಸ್ಯರಿಂದ ಅನುಮೋದನೆ ಪಡೆಯಬೇಕಾಗಿದೆ. ಕಾಂಗ್ರೆಸ್‌ನ ಎಂಟು ಶಾಸಕರು ಸಭಾಪತಿ ಡಿ.ಎಚ್.ಶಂಕರಮೂರ್ತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ನೋಟಿಸ್ ನೀಡಿದ್ದಾರೆ. ಇನ್ನೊಂದೆಡೆ ಬಿಬಿಎಂಪಿಯಲ್ಲಿನ ಅವ್ಯವಹಾರ ಕುರಿತಂತೆ ಪಾಲಿಕೆ ವಿರೋಧಪಕ್ಷದ ನಾಯಕ ಪದ್ಮನಾಭರೆಡ್ಡಿ ದೂರನ್ನು ನೀಡಿದ್ದು, ಕಾಂಗ್ರೆಸ್‌ನ 5 ಮತ್ತು ಜೆಡಿಎಸ್‌ನ ಮೂವರು ಸದಸ್ಯರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಅವಿಶ್ವಾಸ ನಿರ್ಣಯ ಮಂಡಿಸಲು ಮತ್ತು ಕಾರಣ ಕೇಳಿ ನೀಡಿದ್ದ ನೋಟಿಸ್ ಕುರಿತು ಚರ್ಚೆಯನ್ನು ಕೈಗೆತ್ತಿಕೊಳ್ಳಲು ಹದಿನೈದು ದಿನಗಳ ಕಾಲಾವಕಾಶ ಇದೆ ಎಂದು ಸಭಾಪತಿ ಡಿ ಎಚ್ ಶಂಕರಮೂರ್ತಿ ತಿಳಿಸಿದ್ದಾರೆ. ಜೂನ್ 6ರಂದು ಸರಕುಗಳು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ಕುರಿತು ಅರ್ಧದಿನದ ಕಾರ್ಯಾಗಾರವನ್ನೂ ಕೂಡ ಹಮ್ಮಿಕೊಂಡಿರುವುದಾಗಿ ಸಭಾಪತಿಗಳು ತಿಳಿಸಿದ್ದಾರೆ.

## ವಿಮಾನಯಾನ: ಕೌಶಲ್ಯ ತರಬೇತಿ

**ನವದೆಹಲಿ**

ನಾಗರಿಕ ವಿಮಾನಯಾನ ಮತ್ತು ವೈಮಾನಿಕ ವಲಯದಲ್ಲಿ 30 ಸಾವಿರ ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ ನೀಡಲು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ ಮತ್ತು ಬರ್ಡ್ ಅಕಾಡೆಮಿ ಒಪ್ಪಂದಕ್ಕೆ ಸಹಿ ಮಾಡಿವೆ. ಅಧಿಕೃತ ಪ್ರಕಟಣೆಯೊಂದರ ಪ್ರಕಾರ, ಎನ್‌ಎಸ್‌ಡಿಸಿ ಮತ್ತು ಬರ್ಡ್ ಅಕಾಡೆಮಿ ವಿಮಾನಯಾನ ಮತ್ತು ವೈಮಾನಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಅರ್ಹತೆಯನ್ನು ಯುವಜನರಿಗೆ ನೀಡುವಲ್ಲಿ ದೇಶಾದ್ಯಂತ ತರಬೇತಿ ಹಾಗೂ ಪ್ರತಿಭಾ ಕೇಂದ್ರಗಳನ್ನು ಆರಂಭಿಸಲು ಮುಂದಾಗಿವೆ.

## ಜಿಎಸ್‌ಎಲ್‌ವಿ ಮಾರ್ಕ್ ತ್ರಿ ಡಿ-ಒನ್ ರಾಕೆಟ್ ಉಡಾವಣೆ

**ಬೆಂಗಳೂರು**

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ಇಂದು ಇದೇ ಮೊದಲ ಬಾರಿಗೆ ಜಿಎಸ್‌ಎಲ್‌ವಿ ಮಾರ್ಕ್ ತ್ರಿ ಡಿ-ಒನ್ ರಾಕೆಟ್ ಉಡಾವಣೆ ನಡೆಸಲಿದೆ.

ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಬೃಹತ್ ರಾಕೆಟ್ ಉಡಾವಣೆಗೆ 25 ಗಂಟೆ ಮುಂಚಿತ ಇಳಿ ಎಣಿಕೆ ಎಂದು ಮಧ್ಯಾಹ್ನ 3.58ಕ್ಕೆ ಆರಂಭವಾಗಲಿದೆ. ಇಸ್ರೋ ಇದೇ ಮೊದಲ ಬಾರಿಗೆ ಭಾರಿ ಪ್ರಮಾಣದ ಶಕ್ತಿಯುತ ರಾಕೆಟನ್ನು ಸಿದ್ಧಪಡಿಸಿದ್ದು, ಈ ರಾಕೆಟ್ ಜಿ-ಸ್ಯಾಟ್-19 ಸಂಪರ್ಕ ಉಪಗ್ರಹವನ್ನು ಭೂಸ್ಥಿರ ಕಕ್ಷೆಗೆ ಇಂದು ಸಂಜೆ 5.28ಕ್ಕೆ ಹೊತ್ತೊಯ್ಯಲಿದೆ. ಇದೇ ಮೊದಲ ಬಾರಿಗೆ ಇಸ್ರೋ ನಿರ್ಮಿಸಿರುವ ಭಾರಿ ತೂಕದ ಉಪಗ್ರಹವನ್ನು ಈ ರಾಕೆಟ್ ಕೊಂಡೊಯ್ಯಲಿದ್ದು, ಶ್ರೀಹರಿಕೋಟಾದ 2ನೇ ಉಪಗ್ರಹ ಉಡಾವಣಾ ಘಟಕದಿಂದ ರಾಕೆಟ್ ಉಡಾವಣೆಗೊಳ್ಳಲಿದೆ. ಜಿ-ಸ್ಯಾಟ್-19 ಸಂಪರ್ಕ ಉಪಗ್ರಹ 3 ಸಾವಿರದ 136 ಕೆಜಿ ತೂಕವಿದ್ದು, ಬಾಹ್ಯಾಕಾಶದಲ್ಲಿ 10 ವರ್ಷ ಕಾರ್ಯ ನಿರ್ವಹಿಸಲಿದೆ.

## ಟ್ರ್ಯಾಕ್ಟರ್ ಉರುಳಿ ಬಿದ್ದು ಚಾಲಕ ಸಾವು

**ಮಧುಗಿರಿ**

ಕೆರೆಯ ಏರಿಯಿಂದ ಟ್ರ್ಯಾಕ್ಟರ್ ಉರುಳಿ ಬಿದ್ದು ಚಾಲಕ ಸ್ಥಳದಲ್ಲಿಯೇ ಮೃತ ಪಟ್ಟಿರುವ ಘಟನೆ ನಡೆದಿದೆ.

ತಾಲ್ಲೂಕಿನ ಮಿಡಿಗೇಶಿ ಹೋಬಳಿಯ ವೀರಾಪುರ ಗ್ರಾಮದ ಕೆರೆಯ ಏರಿಯ ಮೇಲೆ ಮತ್ತೊಂದು ಟ್ರ್ಯಾಕ್ಟರ್ ನಿಂತಿದ್ದು ಅದರ ಸಮೀಪ ಹೋಗಲು ಯತ್ನಿಸಿದ ಟ್ರ್ಯಾಕ್ಟರ್ ಆಕಸ್ಮಿಕವಾಗಿ ಆಯ ತಪ್ಪಿ ಕೆಳಗೆ ಉರುಳಿದೆ ಆಂಧ್ರ ಮೂಲದ ಕಾಕಿ ದೊಡ್ಡೇರಿ ಗ್ರಾಮದ ಚಾಲಕ ಮುದ್ದರಾಜು (22) ಟ್ರ್ಯಾಕ್ಟರ್ ಕೆಳಗೆ ಸಿಲುಕಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಬಡವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕವಿಗೆ ಪಾಂಡಿತ್ಯ ಬೇಕಿಲ್ಲ:ಸಹೃದಯತೆ ಬೇಕು

### ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಡಾ.ದೊಡ್ಡರಂಗೇಗೌಡ ವ್ಯಾಖ್ಯಾನ

**ತುಮಕೂರು**

ಕವಿಯಾಗುವವರಿಗೆ, ಕವನ ಬರೆಯುವವರಿಗೆ ಪಾಂಡಿತ್ಯ ಬೇಕಿಲ್ಲ. ಅವರಲ್ಲಿ ಸಹೃದಯತೆ ಇರಬೇಕು ಎಂದು ಖ್ಯಾತ ಕವಿ ಡಾ. ದೊಡ್ಡರಂಗೇಗೌಡ ವ್ಯಾಖ್ಯಾನಿಸಿದರು.

ನಗರದ ಶ್ರೀ ಶಿರಡಿ ಸಾಯಿ ಮಂದಿರ ಸಭಾಂಗಣದಲ್ಲಿ ಸಿದ್ಧಾರ್ಥ ನಂಜಪ್ಪನವರ 'ತ್ಯಾಗಿ ಕವನ ಸಂಕಲನ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಹೂವು ಅರಳಿದ ಹಾಗೆ, ನದಿ ಹರಿಯುವ ಹಾಗೆ ಕವಿ ಬೆಳೆಯುತ್ತಾ ಹೋಗಬೇಕು. ತನ್ನ ಹೃದಯದ ಭಾವನೆಗಳಿಗೆ ಬೆಲೆ ಕೊಡಬೇಕು ಎಂದರು.

> ಎಸ್‌ಎಂಎಸ್‌ನಿಂದ ಭಾಷೆ ತಲ್ಲಣಗೊಂಡಿದೆ. ಮೆಸೇಜ್ ಕಳುಹಿಸುವ ಭರದಲ್ಲಿ ಅಕ್ಷರಗಳನ್ನು ನುಂಗಿ ಹಾಕಲಾಗುತ್ತಿದೆ. ಪ್ರೀತಿಯಿಂದ ಕಳುಹಿ ಸುವ 'ಲವ್ ಎಂಬ ಪದವನ್ನು ಸರಿಯಾಗಿ ಕಳುಹಿಸುತ್ತಿಲ್ಲ, ಅಲ್ಲಿಯೂ ಅಕ್ಷರಗಳು ಮೊಟಕಾಗುತ್ತಿವೆ. ಜಾಗತೀಕರಣದ ಪ್ರಭಾವ ಇದು. ಇದರ ಪ್ರಭಾವದಿಂದಾಗಿ ಭಾಷೆ ಈ ಸ್ಥಿತಿ ತಲುಪಿದೆ.
> -ಡಾ. ದೊಡ್ಡರಂಗೇಗೌಡ, ಖ್ಯಾತ ಕವಿ



ತ್ಯಾಗಿ ಕವನ ಲೋಕಾರ್ಪಣೆ ಸಮಾರಂಭದಲ್ಲಿ ಡಾ|| ದೊಡ್ಡರಂಗೇಗೌಡ ಅವರೊಂದಿಗೆ ಕವನಸಂಕಲನ ಕರ್ತೃ ನಂಜಪ್ಪ, ಪ್ರಜಾಪ್ರಗತಿ ಸಂಪಾದಕ ಎಸ್.ನಾಗಣ್ಣ, ಸಾಹಿತಿ ಎನ್.ನಾಗಪ್ಪ, ಅಬ್ಬಿನಹೊಳೆ ಸುರೇಶ್, ಬಾ.ಹ.ರಮಾಕುಮಾರಿ, ಸುಶೀಲ ಸದಾಶಿವಯ್ಯ ಇತರರು.

ಕವಿ ಆಗುವವರು ಧೈರ್ಯವಂತರಾಗಿರಬೇಕು. ತಾನು ಹೇಳುವುದನ್ನು ಧೈರ್ಯದಿಂದ ಹೇಳಬೇಕು. ಹಲವು ಕವಿಗಳು ಇಂತಹ ಮಾರ್ಗದರ್ಶಕರಾಗಿ ನಮ್ಮ ಮುಂದೆ ನಿಲ್ಲುತ್ತಾರೆ. ಬ್ರಿಟೀಷ್ ಆಡಳಿತವಿದ್ದ ಕಾಲದಲ್ಲಿ ದ.ರಾ.ಬೇಂದ್ರೆ ಅವರು ಹಿಂಡಲಗ ಜೈಲಿನಲ್ಲಿ ಇದ್ದಾಗ ಅಲ್ಲಿನ ಕಲೆಕ್ಟರ್ ಒಂದು ಆದೇಶ ಹೊರಡಿಸಿ ಇವರಿಗೆ ಏನು ಬೇಕಾದರೂ ಕೊಡಿ, ಆದರೆ ಪೆನ್ನು, ಪೇಪರ್ ಕೊಡಬೇಡಿ ಎಂದಿದ್ದರಂತೆ. ಆದರೆ ಬೇಂದ್ರೆ ಅವರು ಅಷ್ಟಕ್ಕೆ ಸುಮ್ಮನಾಗಲಿಲ್ಲ, ಜೈಲಿನ ಗೋಡೆಯ ಮೇಲೆಯೇ ತನ್ನ ಉಗುರುಗಳಿಂದ ಬ್ರಿಟೀಷರ ವಿರುದ್ಧ ಕವನ ಬರೆದ ಉದಾಹರಣೆಗಳಿವೆ ಎಂದರು.

ನಾನು ತುಮಕೂರಿಗೆ ಬಂದಾಗ ಆಗುವ ಸಂಭ್ರಮ ಮತ್ತು ಸಡಗರ ಅಷ್ಟಿಷ್ಟಲ್ಲ. ಇದು ನನ್ನ ತವರು ಜಿಲ್ಲೆ, ಇಲ್ಲಿಗೆ ಬರಬೇಕಾದರೆ ಪ್ರೀತಿಯಿಂದಲೇ ಬರುತ್ತೇನೆ. ಪ್ರೊ.ಎಚ್.ಜಿ. ಸಣ್ಣಮುದ್ದಯ್ಯ ಮತ್ತು » 6ನೇ ಪುಟಕ್ಕೆ

### ಸಮಗ್ರ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಕೊಡುಗೆ ಅಪಾರ

## ಜುಲೈ 1:ಮಧುಗಿರಿಗೆ ಮುಖ್ಯಮಂತ್ರಿ



ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ತಾಲ್ಲೂಕಿನ 4 ಪೊಲೀಸ್ ಠಾಣೆಗಳಿಗೆ ನೂತನ ಗಸ್ತು ವಾಹನಗಳನ್ನು ವಿತರಿಸುವ ಕಾರ್ಯಕ್ರಮವನ್ನು ಶಾಸಕ ಕೆ.ಎನ್.ರಾಜಣ್ಣ ಉದ್ಘಾಟಿಸಿದರು.

**ಮಧುಗಿರಿ**

ಜು.1 ರಂದು ತಾಲ್ಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪಟ್ಟಣಕ್ಕೆ ಆಗಮಿಸಲಿದ್ದು ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಕೊಡುಗೆ ಅಪಾರ ಎಂದು ಶಾಸಕ ಕೆ.ಎನ್.ರಾಜಣ್ಣ ತಿಳಿಸಿದರು.

ಪಟ್ಟಣದ ಡಿವೈಎಸ್ಪಿ ಕಚೇರಿಯ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ತಾಲ್ಲೂಕಿನ ಪೊಲೀಸ್ ಠಾಣೆಗಳಿಗೆ ನೂತನ ಗಸ್ತು ವಾಹನದ ಕೀಲಿ ಕೈಯನ್ನು ಇಲಾಖೆಯ ಮುಖ್ಯಸ್ಥರಿಗೆ ವಿತರಿಸಿ ಮಾತನಾಡಿದರು. ಕಳೆದ 4 ವರ್ಷಗಳಲ್ಲಿ ತಾಲ್ಲೂಕಿನಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗಿವೆ. ಅದಕ್ಕೆ ಕಾರಣ ನಮ್ಮ ಪೊಲೀಸ್ ವ್ಯವಸ್ಥೆ. ಡಿಸೆಂಬರ್ ವೇಳೆಗಾಗಲೇ ಚುನಾವಣೆ ಎದುರಾಗುತ್ತಿದ್ದು, ಮತ್ತಷ್ಟೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವಂತೆ ನಮ್ಮ ಅನುದಾನದಲ್ಲೇ 4 ನೂತನ ವಾಹನವನ್ನು ನೀಡುತ್ತಿರುವುದು ನನಗೆ ತೃಪ್ತಿ ತಂದಿದೆ. ವರ್ಷದೊಳಗೆ ಎತ್ತಿನ ಹೊಳೆ ಯೋಜನೆಯಿಂದ ಎಲ್ಲಾ ಕೆರೆಗಳಿಗೂ ನೀರು ಬರಲಿದೆ. ಜಿಲ್ಲೆಗೆ ನೂತನ ಪೊಲೀಸ್ ವರಿಷ್ಠಾಧಿಕಾರಿಗಳು ಆಗಮಿಸಿದ್ದಾರೆ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ನಮ್ಮ ಜಿಲ್ಲೆಯಲ್ಲಿ ಯಾವುದೇ ಅಧಿಕಾರಿಗಳು ಒತ್ತಡವಿಲ್ಲದೆ ಕಾರ್ಯನಿರ್ವಹಿಸಲು ಸೂಕ್ತ ಸ್ಥಳವಾಗಿದೆ ಎಲ್ಲ ಪಕ್ಷದ ನಾಯಕರು ಇಲಾಖಾಧಿಕಾರಿಗಳಿಗೆ ಸಹಕರಿಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

> ವರ್ಷದೊಳಗೆ ಎತ್ತಿನ ಹೊಳೆ ಯೋಜನೆಯಿಂದ ಎಲ್ಲಾ ಕೆರೆಗಳಿಗೂ ನೀರು ಬರಲಿದೆ. ಜಿಲ್ಲೆಗೆ ನೂತನ ಪೊಲೀಸ್ ವರಿಷ್ಠಾಧಿಕಾರಿಗಳು ಆಗಮಿಸಿದ್ದಾರೆ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ನಮ್ಮ ಜಿಲ್ಲೆಯಲ್ಲಿ ಯಾವುದೇ ಅಧಿಕಾರಿಗಳು ಒತ್ತಡವಿಲ್ಲದೆ ಕಾರ್ಯನಿರ್ವಹಿಸಲು ಸೂಕ್ತ ಸ್ಥಳವಾಗಿದೆ ಎಲ್ಲ ಪಕ್ಷದ ನಾಯಕರು ಇಲಾಖಾಧಿಕಾರಿಗಳಿಗೆ ಸಹಕರಿಸಲಿದ್ದಾರೆ ಎಂದು ಶಾಸಕ ಕೆ.ಎನ್. ರಾಜಣ್ಣ ತಿಳಿಸಿದರು.

ಗಸ್ತು ವಾಹನಗಳ ಕೀಲಿಕೈ ವಿತರಿಸಿ ಮಾತನಾಡಿದ ಸಂಸದ ಎಸ್.ಪಿ.ಮುದ್ದಹನುಮೇಗೌಡ, ಕಳೆದ 4 ವರ್ಷದಿಂದ ಮಧುಗಿರಿ ಕ್ಷೇತ್ರ ಉತ್ತಮ ಬದಲಾವಣೆ ಪಡೆದಿದೆ. ಕಾಗದದ ರೂಪದ ಕೆಲಸ ಇಲ್ಲಿ ಕೃತಿಯಾಗಿದೆ. ಹಿಂದೆ ಇಲಾಖೆಗೆ ಉನ್ನತ ತಂತ್ರಜ್ಞಾನ ಹಾಗೂ ವಾಹನಗಳ ಕೊರತೆಯಿತ್ತು. ಆದರೆ ಪರಮೇಶ್ವರ್ ಗೃಹ ಮಂತ್ರಿಯಾದ ನಂತರ ಪರಿಸ್ಥಿತಿ ಸುಧಾರಿಸಿದೆ. ಅದೇ ರೀತಿ ಶಾಸಕ ಕೆ.ಎನ್.ರಾಜಣ್ಣನವರು ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ವಾಹನಗಳ ಲಭ್ಯತೆಯಿಂದ ಪೊಲೀಸರ ಜವಾಬ್ದಾರಿ ಹೆಚ್ಚಾಗಿದೆ ಎಂದರು.

ನೂತನ ಪೊಲೀಸ್ ವರಿಷ್ಠಾಧಿಕಾರಿ ಡಾ.ದಿವ್ಯ ಗೋಪಿನಾಥ್ ಮಾತನಾಡಿ ರಜಾ ದಿನಗಳು ಬಂದರೆ ಸಾಕು ಆರಕ್ಷಕರ ಜವಾಬ್ದಾರಿ ಹೆಚ್ಚಾಗುತ್ತದೆ ದಿನದ 24 ಗಂಟೆ ಕರ್ತವ್ಯ ನಿರ್ವಹಿಸುವ ಇಲಾಖೆ ಎಂದರೆ ಪೊಲೀಸ್ ಇಲಾಖೆ. ನಮಗೆ ಉತ್ತಮ ಕಚೇರಿ, ವಾಹನ, ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಿದರೆ ಸಂತೋಷದಿಂದ ಕರ್ತವ್ಯ » 6ನೇ ಪುಟಕ್ಕೆ

## ಅಪಾಯ ತಂದೊಡ್ಡುವ ಉಪ್ಪಾರಹಳ್ಳಿ ರಸ್ತೆ





**ತುಮಕೂರು**

ನಗರದ ಉಪ್ಪಾರಹಳ್ಳಿ ಮುಖ್ಯ ರಸ್ತೆಯಲ್ಲಿ ಕಂಡುಬರುವ ದೃಶ್ಯಗಳಿವು. ಉಪ್ಪಾರಹಳ್ಳಿ ರೈಲ್ವೆ ನಿಲ್ದಾಣದಿಂದ ಆರಂಭವಾಗಿ ಗೆದ್ದಲಹಳ್ಳಿ ಕಡೆಗೆ ಹೋಗುವ ಪ್ರಮುಖ ರಸ್ತೆಯಲ್ಲಿ ಯುಜಿಡಿ ಮ್ಯಾನ್ ಹೋಲ್‌ಗಳು ಕಂಡುಬರುತ್ತವೆ.

ಸುಮಾರು 25ಕ್ಕೂ ಹೆಚ್ಚು ಯುಜಿಡಿ ಸಂಪರ್ಕದ ಮ್ಯಾನ್‌ಹೋಲ್‌ಗಳು ಈ ರಸ್ತೆಯಲ್ಲಿವೆ. ರಸ್ತೆಯ ನಡುಭಾಗದಲ್ಲಿಯೇ ಇವುಗಳನ್ನು ಅಳವಡಿಸಿರುವುದರಿಂದ ಮೇಲ್ಭಾಗಕ್ಕೆ ತೆರೆದುಕೊಂಡು ಸಂಚಾರಕ್ಕೆ ಅಡಚಣೆಯನ್ನುಂಟು ಮಾಡುತ್ತಿವೆ. ಈ ರಸ್ತೆಯಲ್ಲಿ ಅಪರಿಚಿತರು ಯಾರಾದರೂ ಸಂಚರಿಸಿದರೆ ಈ ಗುಂಡಿಗಳು ಗೋಚರಿಸದೆ ಅಪಘಾತವನ್ನುಂಟು ಮಾಡುವ ಸಾಧ್ಯತೆಗಳೇ ಹೆಚ್ಚು.

ಉಪ್ಪಾರಹಳ್ಳಿ ಮುಖ್ಯ ರಸ್ತೆಯ ನಡುವಿನಲ್ಲೇ ಇವುಗಳು ಇರುವ ಕಾರಣ ಯುಜಿಡಿ ಮ್ಯಾನ್ ಹೋಲ್ ಸುತ್ತಮುತ್ತ ಗುಂಡಿ ಬಿದ್ದಿದ್ದು ಇದನ್ನು ವಾಹನ ಸಂಚಾರರು ತಪ್ಪಿಸಿ ಸಂಚರಿಸಬೇಕಾಗಿದೆ. ಯಾಮಾರಿ ಅದರ ಮೇಲೆಯೇ ಸಂಚರಿಸಿದರೆ ಅಪಘಾತಗಳು ಆಗುವುದು ಸಾಮಾನ್ಯ ಎನ್ನುವಂತಾಗಿದೆ. ಇತ್ತೀಚೆಗೆ ಈ ರಸ್ತೆ ತುಂಬಾ ಜನನಿಬಿಡವಾಗಿರುವುದರಿಂದ ವಾಹನಗಳು ಹೆಚ್ಚಾಗಿ ಓಡಾಡುತ್ತವೆ. ದ್ವಿಚಕ್ರ ವಾಹನಗಳಿಂದ ಹಿಡಿದು ನಗರ ಸಾರಿಗೆ ಬಸ್‌ಗಳು ಸಂಚರಿಸುತ್ತವೆ. ತುಮಕೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ ಗೆದ್ದಲಹಳ್ಳಿ ವರೆಗೆ ಪ್ರತಿನಿತ್ಯ ನಗರ ಸಾರಿಗೆ ವಾಹನಗಳು ಸಂಚರಿಸುತ್ತವೆ. ನೂರಾರು ಮಂದಿ ಪ್ರತಿದಿನ ಈ ಭಾಗದಲ್ಲಿ ಹೋಗಿಬರುತ್ತಾರೆ. ಹೀಗಾಗಿ ಈ ರಸ್ತೆ ಅತ್ಯಂತ ಜನನಿಬಿಡ ರಸ್ತೆಯಾಗಿ ಮಾರ್ಪಾಟಾಗಿದೆ.

ಉಪ್ಪಾರಹಳ್ಳಿ ರಸ್ತೆಯಿಂದ ಹಿಡಿದು ಚನ್ನಪ್ಪನ ಪಾಳ್ಯ, ಶಿವಮೂಕಾಂಬಿಕ ನಗರ ಮುಂತಾದ ಪ್ರದೇಶಗಳು ಈ ವ್ಯಾಪ್ತಿಯಲ್ಲಿ ಬರುತ್ತವೆ. ಇಲ್ಲೆಲ್ಲ ನಾಯಿಗಳ ಹಾವಳಿ ಹೆಚ್ಚಾಗಿದ್ದು, ರಭಸವಾಗಿ ಚಲಿಸುವ ವಾಹನಗಳು ಕೆಲವೊಮ್ಮೆ ನಾಯಿಗಳ ಅಡ್ಡಾದಿಡ್ಡಿ ಓಡಾಟಕ್ಕೆ ಸಿಲುಕುವ ಸಂಭವವೂ ಇದೆ. ಬಹಳಷ್ಟು ಜನ ವಾಹನ ಸವಾರರು ನಾಯಿ ಮತ್ತು ಹಂದಿಗಳ ಹಾವಳಿಯಿಂದಾಗಿ ಅಪಘಾತ ಮಾಡಿಕೊಂಡಿರುವ ಸಾಕಷ್ಟು ಉದಾಹರಣೆಗಳೂ ಇವೆ. ಈ ಭಾಗದ ಜನಪ್ರತಿನಿಧಿಗಳು ಮುತುವರ್ಜಿ ವಹಿಸಿ ನಾಯಿಗಳ ಉಪಟಳ ತಪ್ಪಿಸಬೇಕಾಗಿದೆ. ನಗರ ಪಾಲಿಕೆ ಇತ್ತ ಹೆಚ್ಚು ಗಮನ ಹರಿಸಿ ನಾಯಿಗಳನ್ನು ಹಿಡಿಸುವ ಕಾರ್ಯಕ್ಕೆ ಮುಂದಾದರೆ » 10ನೇ ಪುಟಕ್ಕೆ

04-06-2017.indd 2 6/5/2017 12:22:37 AM